# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಎಂ ನಾಗರಾಜು<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 294 |
| ಉತ್ತರಿಸಬೇಕಾದ ದಿನಾಂಕ | : | 15.02.2023 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪಶುಸಂಗೋಪನೆ ಸಚಿವರು. |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಎಷ್ಟು ಗೋಶಾಲೆಗಳಿವೆ; ಸರ್ಕಾರದ ವತಿಯಿಂದ ಮತ್ತು ಖಾಸಗಿ ಸಂಘ ಸಂಸ್ಥೆಗಳಿಂದ ಎಷ್ಟು ಗೋಶಾಲೆಗಳನ್ನು ನಡೆಸಲಾಗುತ್ತದೆ; | ರಾಜ್ಯಾದ್ಯಂತ ಒಟ್ಟು 290 ಗೋಶಾಲೆಗಳಿವೆ. ಇವುಗಳಲ್ಲಿ 267 ಖಾಸಗಿ ಹಾಗೂ 23 ಸರ್ಕಾರಿ ಗೋಶಾಲೆಗಳು ಕಾರ್ಯನಿರ್ವಹಿಸುತ್ತಿವೆ. |
| ಆ) | ಗೋಶಾಲೆಗಳನ್ನು ನಡೆಸಲು ಸರ್ಕಾರ ಯಾವ ಯಾವ ಸಂಘಟನೆಗಳಿಗೆ, ಮಠಗಳಿಗೆ ಮತ್ತು ಸಂಘ ಸಂಸ್ಥೆಗಳಿಗೆ ಸರ್ಕಾರಿ ಭೂಮಿಯನ್ನು ನೀಡಲಾಗಿದೆ; ಎಲ್ಲೆಲ್ಲಿ ಎಷ್ಟೆಷ್ಟು ಸರ್ಕಾರಿ ಜಮೀನನ್ನು ನಿಬಂಧನೆಗೊಳಪಟ್ಟಂತೆ ನೀಡಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು) | ಗೋಶಾಲೆಗಳನ್ನು ನಡೆಸಲು ಪಶುಪಾಲನಾ ಇಲಾಖೆ ಯಾವುದೇ ಸಂಘಟನೆಗಳಿಗೆ, ಮಠಗಳಿಗೆ ಮತ್ತು ಸಂಘ ಸಂಸ್ಥೆಗಳಿಗೆ ಸರ್ಕಾರಿ ಭೂಮಿಯನ್ನು ನೀಡಿರುವುದಿಲ್ಲ. |
| ಇ) | ಕುರಿ ಮತ್ತು ಜಾನುವಾರುಗಳು ಸತ್ತರೆ ಸರ್ಕಾರದಿಂದ ಎಷ್ಟು ಹಣವನ್ನು ಪರಿಹಾರ ರೂಪದಲ್ಲಿ ನೀಡಲಾಗುವುದು; ಯಾವ ಯೋಜನೆಯಡಿಯಲ್ಲಿ ಹಣವನ್ನು ನೀಡಲಾಗುತ್ತಿದೆ; | ಕುರಿ ಸತ್ತರೆ ಸರ್ಕಾರದಿಂದ ಅನುಗ್ರಹ ಕೊಡುಗೆ ಯೋಜನೆಯಡಿ ಲೆಕ್ಕ ಶೀರ್ಷಿಕೆ:2403–00–104–0–12 (ಕುರಿ ಮತ್ತು ಮೇಕೆಗಳ ಆಕಸ್ಮಿಕ ಸಾವಿಗೆ ಕುರಿ ಮಾಲೀಕರಿಗೆ ಅನುಗ್ರಹ ಕೊಡುಗೆ) 3–6 ತಿಂಗಳ ವಯಸ್ಸಿನ ಕುರಿ/ಮೇಕೆಗಳಿಗೆ ರೂ.3,500/– ಹಾಗೂ 6 ತಿಂಗಳ ಮೇಲ್ಪಟ್ಟ ಕುರಿ/ಮೇಕೆಗಳಿಗೆ ರೂ.5,000/– ಪರಿಹಾರವನ್ನು ಸರ್ಕಾರಿ ಆದೇಶ ಸಂಖ್ಯೆ:ಇ–ಪಸಂಮೀ 25 ಪಪಾಯೋ 2022 ದಿನಾಂಕ:11.04.2022 ಹಾಗೂ ಸಂಖ್ಯೆ:ಇ–ಪಸಂಮೀ 75 ಪಪಾಯೋ 2017, ದಿನಾಂಕ:10.07.2017 ರನ್ವಯ ನೀಡಲಾಗುತ್ತಿದೆ(ಪ್ರತಿ ಲಗತ್ತಿಸಿದೆ).<br><br>ಚರ್ಮಗಂಟು ರೋಗದಿಂದ ಮರಣ ಹೊಂದಿದ ಜಾನುವಾರುಗಳಿಗೆ ಸರ್ಕಾರಿ ಆದೇಶ ಸಂಖ್ಯೆ:ಇ–ಪಸಂಮೀ 82 ಪಪಾಯೋ 2022, ದಿನಾಂಕ:01.10.2022 ರಂತೆ ಕರುಗಳಿಗೆ ರೂ.5,000/– ಹಸುಗಳಿಗೆ ರೂ.20,000/– ಹಾಗೂ ಎತ್ತುಗಳಿಗೆ ರೂ.30,000/– ರಂತೆ ಪರಿಹಾರ ಧನವನ್ನು ನೀಡಲಾಗುತ್ತಿದೆ(ಪ್ರತಿ ಲಗತ್ತಿಸಿದೆ). |

| | | |
|---|---|---|
| ಈ) | ರಾಜ್ಯದಲ್ಲಿ ಒಟ್ಟು ಎಷ್ಟು ಸರ್ಕಾರಿ ಪಶುವೈದ್ಯಕೀಯ ಮತ್ತು ಖಾಸಗಿ ಪಶುವೈದ್ಯಕೀಯ ಆಸ್ಪತ್ರೆಗಳಿವೆ; | ರಾಜ್ಯದಲ್ಲಿ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಲ್ಲಿ ಒಟ್ಟು **4234** ಪಶುವೈದ್ಯಕೀಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಖಾಸಗಿ ಪಶುವೈದ್ಯಕೀಯ ಆಸ್ಪತ್ರೆಗಳು ಈ ಇಲಾಖೆಯಲ್ಲಿ ನೊಂದಣಿ ಮಾಡಿಕೊಳ್ಳುವುದಿಲ್ಲ ಹೀಗಾಗಿ ಮಾಹಿತಿ ಈ ಇಲಾಖೆಯಲ್ಲಿ ಲಭ್ಯವಿರುವುದಿಲ್ಲ. |
| ಊ) | ಸರ್ಕಾರಿ ಪಶುವೈದ್ಯಕೀಯ ಆಸ್ಪತ್ರೆಗಳಲ್ಲಿ ಪಶುವೈದ್ಯರ ಕೊರತೆಯಿದೆಯೇ; ಹಾಗಿದ್ದಲ್ಲಿ, ಖಾಲಿಯಿರುವ ಪಶುವೈದ್ಯರ ಹುದ್ದೆಯನ್ನು ತುಂಬಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಸರ್ಕಾರಿ ಪಶುವೈದ್ಯಕೀಯ ಆಸ್ಪತ್ರೆಗಳಲ್ಲಿ ಪಶುವೈದ್ಯರ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆ.<br><br>ಪ್ರಸ್ತುತ **400** ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಅನುಮೋದನೆ ನೀಡಿರುತ್ತದೆ. ಆ ಪ್ರಕಾರ ವಿಶೇಷ ನೇರ ನೇಮಕಾತಿ ನಿಯಮದಡಿ ದಿನಾಂಕ:08.03.2022 ರಂದು ಅಧಿಸೂಚನೆ ಹೊರಡಿಸಲಾಗಿರುತ್ತದೆ. ಅಭ್ಯರ್ಥಿಗಳು ಅರ್ಜಿಯೊಂದಿಗೆ ಸಲ್ಲಿಸಲಾದ ಮೂಲ ದಾಖಲಾತಿಗಳ ಪರಿಶೀಲನೆಯನ್ನು ಮಾಡಲಾಗುತ್ತಿದ್ದು, ಅರ್ಹತಾ ಪಟ್ಟಿ ತಯಾರಿಸಲಾಗುತ್ತಿದೆ.<br><br>ಈ ನೇಮಕಾತಿ ಕುರಿತು ಶೈಕ್ಷಣಿಕ ವಿದ್ಯಾರ್ಹತೆಯನ್ನು (Merit) ಆಧರಿಸಿ ಆಯ್ಕೆ ಮಾಡುವುದು ಸರಿಯಲ್ಲವೆಂದು ಕೆಲವು ಅಭ್ಯರ್ಥಿಗಳು (**50** ಜನ) ಸ್ಪರ್ಧಾತ್ಮಕ ಪರೀಕ್ಷೆ ನಡೆಸುವುದರ ಮುಖಾಂತರ ಹಾಗೂ ಇನ್ನಿತರೆ ಶೈಕ್ಷಣಿಕ ನ್ಯೂನತೆಗಳ ಸಂಬಂಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:6662/2022 ರಂತೆ ದಾವೆಯನ್ನು ಹೂಡಿದ್ದು, ಈ ಪ್ರಕರಣವನ್ನು ಮಾನ್ಯ KSAT ಬೆಂಗಳೂರಿನ ನ್ಯಾಯಾಲಯಕ್ಕೆ ವರ್ಗಾಯಿಸಿರುತ್ತದೆ.<br><br>ಪ್ರಕರಣದ ವಿಚಾರಣೆಯು ಮುಗಿದಿದ್ದು, ಅಂತಿಮ ತೀರ್ಪಿಗೆ ಕಾಯ್ದಿರಿಸಲಾಗಿದೆ. ಮಾನ್ಯ ನ್ಯಾಯಾಲಯದ ಆದೇಶದಂತೆ ಕ್ರಮವಹಿಸಲಾಗುವುದು. |

**ಇ–ಪಸಂಮೀ 32 ಸಲೆವಿ 2023**

(ಪ್ರಭು ಬಿ. ಚವ್ಹಾಣ್)
ಪಶುಸಂಗೋಪನೆ ಸಚಿವರು

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 2022-23ನೇ ಸಾಲಿನ ಆಯವ್ಯಯದ ಕಂಡಿಕೆ-57 ರಡಿ ಘೋಷಣೆಯಾಗಿರುವ "ಅನುಗ್ರಹ ಕೊಡುಗೆ ಯೋಜನೆ" ಯಡಿ ಆಕಸ್ಮಿಕ ಮರಣ ಹೊಂದಿದ 3-6 ತಿಂಗಳ ವಯಸ್ಸಿನ ಕುರಿ / ಮೇಕೆಗಳಿಗೆ ನೀಡುವ ಪರಿಹಾರ ಧನವನ್ನು 2,500 ರೂ. ಗಳಿಂದ 3,500 ರೂ. ಗಳಿಗೆ ಹೆಚ್ಚಿಸಲಾಗುವ ಯೋಜನೆ'ಗೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಓದಲಾಗಿದೆ:-

1. 2022-23ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ-57.
2. ಸರ್ಕಾರದ ಆದೇಶ ಸಂಖ್ಯೆ:ಪಸಂಮೀ 75 ಪಪಾಯೋ 2017, ದಿನಾಂಕ:10.07.2017.
3. ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು ಇವರ ಏಕ ಕಡತ ಸಂಖ್ಯೆ: CAHVS-DEV0NSC/5/2022-DEVCAH-COMM AHVS.

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಂತೆ 2022-23ನೇ ಸಾಲಿನ ಆಯವ್ಯಯದ ಕಂಡಿಕೆ-57 ರಡಿ ಘೋಷಣೆಯಾಗಿರುವ "ಅನುಗ್ರಹ ಕೊಡುಗೆ ಯೋಜನೆ" ಯಡಿ ಆಕಸ್ಮಿಕ ಮರಣ ಹೊಂದಿದ 3-6 ತಿಂಗಳ ವಯಸ್ಸಿನ ಕುರಿ / ಮೇಕೆಗಳಿಗೆ ನೀಡುವ ಪರಿಹಾರ ಧನವನ್ನು 2,500 ರೂ. ಗಳಿಂದ 3,500 ರೂ. ಗಳಿಗೆ ಹೆಚ್ಚಿಸಲಾಗುವ ಯೋಜನೆ ಘೋಷಣೆಯಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಂತೆ 2017-18 ಸಾಲಿನಲ್ಲಿ ಆಕಸ್ಮಿಕ ಮರಣ ಹೊಂದಿದ ಕುರಿ/ಮೇಕೆಗಳ ಮಾಲೀಕರಿಗೆ ಪರಿಹಾರಧನ ನೀಡಲು ಮಾರ್ಗಸೂಚಿಗಳನ್ವಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಮಂಜೂರಾತಿ ನೀಡಿ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಅನುಷ್ಠಾನಾಧಿಕಾರಿಗಳು, ವ್ಯವಸ್ಥಾಪಕ ನಿರ್ದೇಶಕರು, ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ, ಹೆಬ್ಬಾಳ, ಬೆಂಗಳೂರು ರವರು ವಿಸ್ತೃತ ಯೋಜನೆ ವರದಿಯಲ್ಲಿ ಕುರಿ ಮತ್ತು ಮೇಕೆಗಳ ಆಕಸ್ಮಿಕ ಸಾವಿಗೆ ಕುರಿ ಮಾಲೀಕರಿಗೆ ಪರಿಹಾರ ಧನ ನೀಡುವ "ಅನುಗ್ರಹ ಕೊಡುಗೆ ಯೋಜನೆ"ಯಡಿ ಪ್ರಸ್ತುತ ಆಕಸ್ಮಿಕವಾಗಿ ಮರಣ ಹೊಂದಿದ 3-6 ತಿಂಗಳ ವಯಸ್ಸಿನ ಕುರಿ/ಮೇಕೆಗಳಿಗೆ ಸರ್ಕಾರದ ಆದೇಶ ಸಂ:ಪಸಂಮೀ:75:ಪಪಾಯೋ:2017 ಬೆಂಗಳೂರು, ದಿ:10-07-2017ರ ಆದೇಶ ಹಾಗು ಮಾರ್ಗಸೂಚಿಗಳ ಅನ್ವಯ ರೂ.2500/- ಗಳನ್ನು ನೀಡಲಾಗುತ್ತಿದೆ. 2022-23ನೇ ಸಾಲಿನ ಆಯವ್ಯಯದ ಕಂಡಿಕೆ-57 ರಲ್ಲಿ "ಅನುಗ್ರಹ ಕೊಡುಗೆ ಯೋಜನೆ" ಯಡಿ ಆಕಸ್ಮಿಕ ಮರಣ ಹೊಂದಿದ 3-6 ತಿಂಗಳ ವಯಸ್ಸಿನ ಕುರಿ / ಮೇಕೆಗಳಿಗೆ ನೀಡುವ ಪರಿಹಾರ ಧನವನ್ನು 2,500 ರೂ. ಗಳಿಂದ 3,500 ರೂ. ಗಳಿಗೆ ಹೆಚ್ಚಿಸಲಾಗುವುದು ಎಂದು ಘೋಷಿಸಿರುವ ಯೋಜನೆಗೆ ಸರ್ಕಾರದ ಆಡಳಿತಾತ್ಮಕ ಆದೇಶ ನೀಡಲು ವಿನಂತಿಸಿರುತ್ತಾರೆ. ಸದರಿ ಯೋಜನೆಗೆ 2022-23 ನೇ ಸಾಲಿಗೆ ಅಂದಾಜು ರೂ.30.00 ಕೋಟಿಗಳ ಅನುದಾನದ ಅವಶ್ಯಕತೆ ಇದ್ದು, 2022-23 ನೇ ಸಾಲಿನ ಆಯವ್ಯಯ ಘೋಷಣೆಯ ಪ್ರತಿಯಂತೆ ಪರಿಹಾರವನ್ನು ಹೆಚ್ಚಿಸಿರುವುದರಿಂದ ರೂ.5.00 ಕೋಟಿಗಳ ಅನುದಾನ ಹೆಚ್ಚುವರಿಯಾಗಿ ಬೇಕಾಗಿರುತ್ತದೆ. ಆದ್ದರಿಂದ ಒಟ್ಟಾರೆಯಾಗಿ 2022-23 ನೇ ಸಾಲಿಗೆ ಅಂದಾಜು ರೂ.35.00 ಕೋಟಿಗಳ ಅನುದಾನದ ಅವಶ್ಯಕತೆ ಇರುತ್ತದೆ.

...2

ಆದರೆ, 2022-23 ನೇ ಸಾಲಿನ ಆಯವ್ಯಯದ Expenditure Volume-III ಕುರಿ ಮತ್ತು ಮೇಕೆಗಳ ಆಕಸ್ಮಿಕ ಸಾವಿಗೆ ಕುರಿ ಮಾಲೀಕರಿಗೆ ಅನುಗ್ರಹ ಕೊಡುಗೆ ಯೋಜನೆಯ ಲೆಕ್ಕ ಶೀರ್ಷಿಕೆ:2403-00-104-0-12 ರಡಿಯಲ್ಲಿ ಯಾವುದೇ ಅನುದಾನ ನಿಗದಿ ಮಾಡಿರುವುದಿಲ್ಲ. ಸದರಿ ಲೆಕ್ಕಶೀರ್ಷಿಕೆಯಡಿ ರೂ.35.00 ಕೋಟಿಗಳ ಅನುದಾನ ಬಿಡುಗಡೆ ಮಾಡಲು ಹಾಗೂ 2022-23 ನೇ ಸಾಲಿನ ಆಯವ್ಯಯದ ಕಂಡಿಕೆ-57 ರಲ್ಲಿ ಘೋಷಿಸಿರುವ ಯೋಜನೆಗೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ ಇವರು ಸಲ್ಲಿಸಿರುವ ಮೇಲ್ಕಂಡ ಯೋಜನೆಯ ವಿಸ್ತೃತ ಕ್ರಿಯಾಯೋಜನೆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಇ-ಪಸಂಮೀ 25 ಪಪಾಯೋ 2022</u>**

**<u>ಬೆಂಗಳೂರು, ದಿನಾಂಕ:11.04.2022.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2022-23ನೇ ಸಾಲಿನ ಆಯವ್ಯಯದ ಕಂಡಿಕೆ-57 ರಡಿ ಘೋಷಣೆಯಾಗಿರುವ ಯೋಜನೆಯು ಮುಂದುವರೆದ ಯೋಜನೆಯಾಗಿದ್ದು, ಲೆಕ್ಕ ಶೀರ್ಷಿಕೆ:2403-00-104-0-12 (ಕುರಿ ಮತ್ತು ಮೇಕೆಗಳ ಆಕಸ್ಮಿಕ ಸಾವಿಗೆ ಕುರಿ ಮಾಲೀಕರಿಗೆ ಅನುಗ್ರಹ ಕೊಡುಗೆ) ರಡಿ "ಅನುಗ್ರಹ ಕೊಡುಗೆ ಯೋಜನೆ" ಯಡಿ ಆಕಸ್ಮಿಕ ಮರಣ ಹೊಂದಿದ 3-6 ತಿಂಗಳ ವಯಸ್ಸಿನ ಕುರಿ / ಮೇಕೆಗಳಿಗೆ ನೀಡುವ ಪರಿಹಾರ ಧನವನ್ನು ರೂ.2,500 ಗಳಿಂದ ರೂ.3,500 ಗಳಿಗೆ ಹೆಚ್ಚಿಸಲಾದ ಯೋಜನೆಗೆ 2021-22ನೇ ಸಾಲಿನ ಪೂರಕ ಅಂದಾಜು-3 ರಲ್ಲಿ ಒದಗಿಸಲಾದ ಅನುದಾನವನ್ನು ಬಳಕೆ ಮಾಡಿಕೊಂಡು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.

ಮುಂದುವರೆದು, ಈ ಹಿಂದೆ ಹೊರಡಿಸಲಾಗಿದ್ದ ಸರ್ಕಾರದ ಆದೇಶ ಸಂಖ್ಯೆ:ಪಸಂಮೀ/75/ಪಪಾಯೋ/2017, ದಿನಾಂಕ:10-07-2017ರ ಆದೇಶದಲ್ಲಿನ ಮಾರ್ಗಸೂಚಿಗಳನ್ನು ಅನುಸರಿಸಿ ಯೋಜನೆಯನ್ನು ಅನುಷ್ಠಾನಗೊಳಿಸುವುದು.

ಈ ಆದೇಶವನ್ನು ಅನುದಾನ ಬಿಡುಗಡೆ ಆದೇಶವೆಂದು ಪರಿಭಾವಿಸತಕ್ಕದ್ದಲ್ಲ.

ಈ ಆದೇಶವನ್ನು ಆರ್ಥಿಕ ಇಲಾಖೆ ಅನಧಿಕೃತ ಟಿಪ್ಪಣಿ ಸಂಖ್ಯೆ:ಆಇ/53/ವೆಚ್ಚ-4/2022, ದಿನಾಂಕ:05.04.2022 ಮತ್ತು ಟಿಪ್ಪಣಿ ಸಂಖ್ಯೆ:ಆಇ 175/ವೆಚ್ಚ-4/2022, ದಿನಾಂಕ:08.04.2022 ಹಾಗೂ ಯೋಜನಾ ಇಲಾಖೆಯ ಹಿಂಬರಹ ಸಂಖ್ಯೆ:PDS-PFO/13/2022, ದಿನಾಂಕ:29.03.2022 ರನ್ವಯ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಪಿ.ಎಸ್. ಪ್ರವೀಣ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
(ಪಶುಸಂಗೋಪನೆ)

11/04

ಗೆ:

ಮಹಾಲೇಖಪಾಲರು (ಎ ಮತ್ತು ಇ) ಕರ್ನಾಟಕ ಬೆಂಗಳೂರು

2. ಮಾನ್ಯ ಮುಖ್ಯ ಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ವಿಧಾನ ಸೌಧ ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು ಆರ್ಥಿಕ ಇಲಾಖೆ / ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.
5. ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು.
6. ನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು.
7. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ, ಹೆಬ್ಬಾಳ, ಬೆಂಗಳೂರು.
8. ಖಜಾನಾಧಿಕಾರಿಗಳು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
9. ಉಪ ನಿರ್ದೇಶಕರು, ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು.
10. ಎಲ್ಲಾ ಜಿಲ್ಲೆಗಳ ಉಪ ನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ (ಆಯುಕ್ತರ ಮುಖಾಂತರ)

**ಪ್ರತಿಗಳು:-**

1. ಮಾನ್ಯ ಪಶುಸಂಗೋಪನೆ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.
3. ಸರ್ಕಾರದ ಜಂಟಿ ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.
4. ಕಂಟ್ರೋಲ್ ರೂಂ ಕಂ-24/7 ಹೆಲ್ಪ್ ಲೈನ್ (ಸಹಾಯವಾಣಿ) ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಹೆಬ್ಬಾಳ, ಬೆಂಗಳೂರು.
5. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2017-18 ನೇ ಸಾಲಿನಲ್ಲಿ ಆಕಸ್ಮಿಕ ಮರಣ ಹೊಂದಿದ ಕುರಿ/ಮೇಕೆ ಮರಿಗಳಿಗೆ ಪರಿಹಾರ ನೀಡಲು ಮಾರ್ಗಸೂಚಿಗಳನ್ನು ಹೊರಡಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರದ ಆದೇಶ ಸಂಖ್ಯೆ: ಪಸಂಮೀ 75 ಸಪಾಯೋ 2017, ದಿನಾಂಕ:16.05.2017.

2) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇವರ ದಿನಾಂಕ:31.05.2017ರ ಪತ್ರ.

**ಪ್ರಸ್ತಾವನೆ:**

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ 2017-18 ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿದಂತೆ 6 ತಿಂಗಳೊಳಗೆ ಸಾವು ಸಂಭವಿಸುವ ಕುರಿ /ಮೇಕೆ ಮರಿಗಳಿಗೆ ರೂ.2500/- ಹಾಗೂ 6 ತಿಂಗಳ ನಂತರ ಸಾವಿಗೀಡಾಗುವ ಕುರಿ/ಮೇಕೆ ಮರಿಗಳಿಗೆ ರೂ. 5000/- ಗಳ ಪರಿಹಾರವನ್ನು ಲೆಕ್ಕಶೀರ್ಷಿಕೆ: 2403-00-104-0-12 "ಕುರಿ ಮತ್ತು ಮೇಕೆಗಳ ಆಕಸ್ಮಿಕ ಸಾವಿಗೆ ಕುರಿ ಮಾಲೀಕರಿಗೆ ಅನುಗ್ರಹ ಕೊಡುಗೆ" ರಡಿ ಪರಿಹಾರ ನೀಡಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇವರು ಮೇಲೆ ಕ್ರಮ ಸಂಖ್ಯೆ(2) ರಲ್ಲಿ ಓದಲಾದ ಪತ್ರದಲ್ಲಿ 2017-18 ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿದಂತೆ 6 ತಿಂಗಳೊಳಗೆ ಸಾವು ಸಂಭವಿಸುವ ಕುರಿ /ಮೇಕೆ ಮರಿಗಳಿಗೆ ರೂ.2500/- ಹಾಗೂ 6 ತಿಂಗಳ ನಂತರ ಸಾವಿಗೀಡಾಗುವ ಕುರಿ/ಮೇಕೆ ಮರಿಗಳಿಗೆ ರೂ. 5000/- ಗಳ ಪರಿಹಾರವನ್ನು ಲೆಕ್ಕಶೀರ್ಷಿಕೆ: 2403-00-104-0-12 "ಕುರಿ ಮತ್ತು ಮೇಕೆಗಳ ಆಕಸ್ಮಿಕ ಸಾವಿಗೆ ಕುರಿ ಮಾಲೀಕರಿಗೆ ಅನುಗ್ರಹ ಕೊಡುಗೆ" ರಡಿ ಪರಿಹಾರ ನೀಡಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಈ ಸಂಬಂಧ ಮಾರ್ಗಸೂಚಿಗಳನ್ನು ಹೊರಡಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು 2017-18 ನೇ ಸಾಲಿನಲ್ಲಿ ಆಕಸ್ಮಿಕ ಮರಣ ಹೊಂದಿದ ಕುರಿ/ಮೇಕೆ ಮರಿಗಳ ಮಾಲೀಕರಿಗೆ ಪರಿಹಾರ ಧನ ನೀಡಲು ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿರುವ ಮಾರ್ಗಸೂಚಿಗಳನ್ನು ಹೊರಡಿಸಲು ತೀರ್ಮಾನಿಸಲಾಗಿದೆ. ಅದರಂತೆ, ಈ ಕೆಳಕಂಡ ಆದೇಶ.

**ಆದೇಶ ಸಂಖ್ಯೆ: ಪಸಂಮೀ 75 ಪಪಾಯೋ 2017**
**ಬೆಂಗಳೂರು, ದಿನಾಂಕ: 10.07.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2017-18 ನೇ ಸಾಲಿನಲ್ಲಿ ಆಕಸ್ಮಿಕ ಮರಣ ಹೊಂದಿದ ಕುರಿ/ ಮೇಕೆ ಮರಿಗಳ ಮಾಲೀಕರಿಗೆ ಪರಿಹಾರ ಧನ ನೀಡಲು



Generated from eOffice by MAMATHA S, AHF-Asst(MS), ASSISTANT, Animal Husbandary Fisheries sec on 13/06/2022 12:09 PM

ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿರುವ ಮಾರ್ಗಸೂಚಿಗಳನ್ವಯ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಮಂಜೂರಾತಿ ನೀಡಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಟಿ.ಎಸ್.ಸುದರ್ಶನ್ ಕುಮಾರ್) 10/7/17
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಪಶುಸಂಗೋಪನೆ)

ಗೆ:

1. ಮಹಾಲೇಖಪಾಲರು, (ಎ ಮತ್ತು ಇ) ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ, ಹೆಬ್ಬಾಳ, ಬೆಂಗಳೂರು.
5. ಮಾನ್ಯ ಪಶುಸಂಗೋಪನಾ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನಸೌಧ ಬೆಂಗಳೂರು.
7. ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಪೋಡಿಯಂ ಬ್ಲಾಕ್,-ವಿ.ವಿ.ಗೋಪುರ, ಬೆಂಗಳೂರು.
8. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
9. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ, ಬೆಂಗಳೂರು.
10. ಉಪ ನಿರ್ದೇಶಕರು, ಗಣಕಕಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು.
11. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.



Generated from eOffice by MAMATHA S, AHF-Asst(MS), ASSISTANT, Animal Husbandary Fisheries sec on 13/06/2022 12:09 PM

-2-

- ಸಾಂಕ್ರಾಮಿಕ ರೋಗಗಳಿಂದ ಹಾಗೂ ನಾಶಕಾರಿ ಆಹಾರ ಸೇವನೆ/ಗಿಡ ಮರಗಳ ಸೊಪ್ಪು ಸೇವನೆಯಿಂದ 10 ಕ್ಕಿಂತ ಹೆಚ್ಚು ಕುರಿ/ಮೇಕೆ ಮರಿಗಳು ಏಕಕಾಲದಲ್ಲಿ ಮರಣ ಹೊಂದಿದಲ್ಲಿ ಪ್ರಾದೇಶಿಕ ಪ್ರಾಣಿ ಆರೋಗ್ಯ ಮತ್ತು ಜೈವಿಕ ಸಂಸ್ಥೆ ಪ್ರಯೋಗಾಲಯದಿಂದ ವರದಿ ಪಡೆದು ಪ್ರತಿ ಸಲ್ಲಿಸಬೇಕು.
- ಬೇರೆಡೆ ಪರಿಹಾರ ಪಡೆದಿದ್ದಲ್ಲಿ ಪರಿಹಾರ ಮೊತ್ತವನ್ನು ಕಳೆದು ಪರಿಹಾರ ನೀಡಬೇಕು.

ಪರಿಹಾರ ಧನ ಮಂಜೂರಾತಿಗಾಗಿ ಸಲ್ಲಿಸಬೇಕಾದ ದಾಖಲಾತಿಗಳು:-

1. ಕುರಿ/ಮೇಕೆ/ ಮರಿಗಳ ಶವಗಳ ಜೊತೆ ಮರಣೋತ್ತರ ಪರೀಕ್ಷೆ ಮಾಡಿದ ಇಲಾಖೆಯ ಪಶುವೈದ್ಯರು ಮತ್ತು ಫಲಾನುಭವಿ ಇರುವ ಕಲರ್ ಫೋಟೋ ತೆಗೆಸಿ ಸದರಿ ಪಶು ವೈದ್ಯರಿಂದ ದೃಢೀಕರಿಸುವುದು.
2. ಒಂದಕ್ಕಿಂತ ಹೆಚ್ಚಿಗೆ ಕುರಿ/ಮೇಕೆ/ಮರಿಗಳು ಮರಣಿಸಿದಲ್ಲಿ ಮರಣಿಸಿದ ಎಲ್ಲಾ ಕುರಿ/ಮೇಕೆ/ಮರಿಗಳೊಂದಿಗೆ ಪಶುವೈದ್ಯರು ಮತ್ತು ಫಲಾನುಭವಿಯೊಂದಿಗೆ ಒಂದು ಕಲರ್ ಛಾಯಾಚಿತ್ರ ಹಾಗೂ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ಎಲ್ಲಾ ಕುರಿ/ಮೇಕೆಮರಿಗಳೊಂದಿಗೆ ಪಶುವೈದ್ಯರು ಮತ್ತು ಫಲಾನುಭವಿ ಇರುವ ಒಂದು ಕಲರ ಛಾಯಾಚಿತ್ರವನ್ನು ತೆಗೆಸಿ ಪಶುವೈದ್ಯರು ದೃಢೀಕರಿಸಬೇಕು.
3. ಕುರಿ/ಮೇಕೆ/ಮರಿಗಳ ಮರಣೋತ್ತರ ಪರೀಕ್ಷಾ ವರದಿ. (ಪ್ರತಿ ಕುರಿ/ಮೇಕೆ/ಮರಿಗಳ ಪ್ರತ್ಯೇಕ ಮರಣೋತ್ತರ ಪರೀಕ್ಷಾ ವರದಿ)
4. ತಾಲ್ಲೂಕು ಸಮಿತಿ ವರದಿ.
5. ಅಪಘಾತ ಸಂದರ್ಭಗಳಲ್ಲಿ F.I.R (ಪ್ರಾಥಮಿಕ ತನಿಖಾ ವರದಿ) ಕಡ್ಡಾಯ.
6. ಹತ್ತಕ್ಕಿಂತ ಹೆಚ್ಚು ಕುರಿ/ಮೇಕೆ ಮರಿಗಳು ಮರಣ ಹೊಂದಿದಲ್ಲಿ ಪ್ರಯೋಗಾಲಯದಿಂ ದೃಢೀಕರಿಸಿದ ಪ್ರಮಾಣ ಪತ್ರ ಸಲ್ಲಿಸಬೇಕು.
7. ಫಲಾನುಭವಿಯ ಆಧಾರ್ ಸಂಖ್ಯೆ, ಮೊಬೈಲ್ ಸಂಖ್ಯೆ, ಬ್ಯಾಂಕಿನ ಉಳಿತಾಯ ಖಾ ಸಂಖ್ಯೆ (IFSC Code & Name of the Branch)
8. ಮುಂಗಡ ಹಣ ಸಂದಾಯ ರಸೀದಿ (ನಿಗದಿತ ನಮೂನೆಯಲ್ಲಿ) ಫಲಾನುಭವಿಯ ಸ ದೃಢೀಕರಿಸಬೇಕು.
9. ಫಲಾನುಭವಿಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿರುವ ಫಲಾನುಭವಿಗಳು ಜಾತಿ ದೃಢೀಕರಣ ಪತ್ರದ ಪ್ರತಿಯನ್ನು ಸಲ್ಲಿಸಬೇಕು.

ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿ ವಿವಿಧ ಹಂತಗ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಮತ್ತು ಕರ್ನಾಟಕ ಕುರಿ ಮತ್ತು ಉ ಅಭಿವೃದ್ಧಿ ನಿಗಮ ನಿಯಮಿತದ ಅಧಿಕಾರಿಗಳು ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿ ನಿಗಮದ ಮುಖೇನ ಅನುಷ್ಠಾನಗೊಳ್ಳುವ ಪರಿಹಾರ ಧನ (Ex-gratia) ಯೋಜನ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ನಿರ್ವಹಿಸಬೇಕಾದ ಕರ್ತವ್ಯಗಳು ಹಾ ಜವಾಬ್ದಾರಿಗಳನ್ನು ಈ ಕೆಳಗಿನಂತೆ ನಿಗಧಿಪಡಿಸಿದೆ.



Generated from eOffice by MAMATHA S, AHF-Asst(MS), ASSISTANT, Animal Husbandary Fisheries sec on 13/06/2022 12:09 PM

ಸರ್ಕಾರಿ ಆದೇಶ ಸಂಖ್ಯೆ:ಪಸಂಮೀ/ 75 /ಪಪ್ರಯೋ/2017 ದಿನಾಂಕ:16.01.2017ಕ್ಕೆ
ಅನುಬಂಧ

ಆಕಸ್ಮಿಕ ಮರಣ ಹೊಂದಿದ ಕುರಿ ಮತ್ತು ಮೇಕೆ ಹಾಗೂ ಕುರಿ/ಮೇಕೆ ಮರಿಗಳಗೆ ಪರಿಹಾರ ನೀಡುವ ಯೋಜನೆ ಕುರಿತು.(Ex-gratia) ಮಾರ್ಗಸೂಚಿಗಳು

- ಪರಿಹಾರ ಧನ ನೀಡುವಿಕೆಗೆ ವಿಮೆ ಮಾಡಿಸದ ಹಾಗೂ ಆಕಸ್ಮಿಕವಾಗಿ ಮರಣಿಸಿದ 3 ರಿಂದ 6 ತಿಂಗಳೊಳಗಿನ ಕುರಿ/ಮೇಕೆಗಳಿಗೆ ಮತ್ತು 6 ತಿಂಗಳ ಮೇಲ್ಪಟ್ಟ ಕುರಿ/ಮೇಕೆಗಳಿಗೆ ಈ ಕೆಳಕಂಡ ಮಾರ್ಗಸೂಚಿಗಳನ್ನು ನಿಗದಿ ಪಡಿಸಿದೆ.
- 3 ತಿಂಗಳ ಮೇಲ್ಪಟ್ಟ ವಯಸ್ಸಿನ ಹಾಗೂ 6 ತಿಂಗಳ ವಯಸ್ಸಿನೊಳಗಿನ ಕುರಿ/ಮೇಕೆ ಮರಿಗಳು ಮತ್ತು 6 ತಿಂಗಳ ಮೇಲ್ಪಟ್ಟ ಕುರಿ/ಮೇಕೆಗಳಿಗೆ ಮರಣ ಹೊಂದಿದಾಗ ಪರಿಹಾರ ಧನ ನೀಡಿಕೆ ಪರಿಗಣಿಸಬೇಕು.
- ಮರಣ ಹೊಂದಿದ ಕುರಿ/ಮೇಕೆ/ಮರಿಗಳ ಜೊತೆಗೆ ಶವ ಪರೀಕ್ಷೆಯ ಮೊದಲು ಮತ್ತು ಶವ ಪರೀಕ್ಷೆಯ ನಂತರ, ಶವ ಪರೀಕ್ಷೆ ನಡೆಸಿದ ಪಶು ವೈದ್ಯರು ಮತ್ತು ಫಲಾನುಭವಿಯ ಸಹಿತ ಕಲರ್ ಛಾಯಾ ಚಿತ್ರ ಕಡ್ಡಾಯವಾಗಿ ತೆಗೆಸಿ. ಮರಣೋತ್ತರ ಪರೀಕ್ಷೆ ಮಾಡಿದ ಪಶುವೈದ್ಯರು ದೃಢೀಕರಿಸಬೇಕು.
- ಒಂದಕ್ಕಿಂತ ಹೆಚ್ಚಿಗೆ ಕುರಿ/ಮೇಕೆಗಳು/ಮರಿಗಳು ಮರಣಿಸಿದಲ್ಲಿ ಮರಣಿಸಿದ ಎಲ್ಲಾ ಕುರಿ/ಮೇಕೆಗಳೊಂದಿಗೆ ಪಶುವೈದ್ಯರು ಮತ್ತು ಫಲಾನುಭವಿಯೊಟ್ಟಿಗೆ ಒಂದು ಕಲರ್ ಛಾಯಾಚಿತ್ರ ಹಾಗೂ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ಎಲ್ಲಾ ಕುರಿ/ಮೇಕೆ/ಮರಿಗಳೊಂದಿಗೆ ಪಶುವೈದ್ಯರು ಮತ್ತು ಫಲಾನುಭವಿ ಇರುವ ಒಂದು ಕಲರ್ ಛಾಯಾಚಿತ್ರವನ್ನು ತೆಗೆಸಿ ಪಶುವೈದ್ಯರು ದೃಢೀಕರಿಸಬೇಕು.
- ಶವ ಪರೀಕ್ಷೆ ನಡೆಸಿದ ಪಶು ವೈದ್ಯರು ಪ್ರತಿ ಕುರಿ/ಮೇಕೆ/ಮರಿಗಳಿಗೆ ಪ್ರತ್ಯೇಕ ಮರಣೋತ್ತರ ವರದಿ ಸಲ್ಲಿಸಬೇಕು.
- 3 ರಿಂದ 6 ತಿಂಗಳೊಳಗಿನ ಕುರಿ/ಮೇಕೆ/ಮರಿಗಳು ಮತ್ತು 6 ತಿಂಗಳ ಮೇಲ್ಪಟ್ಟ ಕುರಿ/ಮೇಕೆಗಳು ಯಾವುದೇ ಕಾರಣ/ರೋಗದಿಂದ ಮರಣ ಹೊಂದಿದ್ದರೂ ಪರಿಹಾರಕ್ಕೆ ಅರ್ಹವಿರುತ್ತವೆ.
- 3 ರಿಂದ 6 ತಿಂಗಳೊಳಗಿನ ಮರಣ ಹೊಂದಿದ ಪ್ರತಿ ಕುರಿ/ಮೇಕೆ ಮರಿಗಳಿಗೆ ತಲಾ 2500/- ರೂ.ಗಳ ಪರಿಹಾರ ಧನ ಹಾಗೂ 6 ತಿಂಗಳ ವಯಸ್ಸಿನ ನಂತರ ಮರಣಿಸಿದ ಕುರಿ/ಮೇಕೆಗಳು ಮರಣ ಹೊಂದಿದಲ್ಲಿ ಪ್ರತಿ ಕುರಿ/ಮೇಕೆಗೆ ರೂ. 5000-00ಗಳ ಪರಿಹಾರಧನವನ್ನು ನೀಡಬೇಕು. ಅಲ್ಲದೇ ಕಾಲಕಾಲಕ್ಕೆ ಸರ್ಕಾರದಿಂದ ಪರಿಹಾರ ಧನ ಮೊತ್ತ ಪರಿಷ್ಕರಿಸಿದ್ದಲ್ಲಿ ಅದರಂತೆ ಕ್ರಮವಹಿಸಬೇಕು.
- ಈಗಾಗಲೇ ಸರ್ಕಾರ ರಚಿಸಿದ ತಾಲ್ಲೂಕು ಪರಿಶೀಲನಾ ಸಮಿತಿಯಿಂದ ಪರಿಶೀಲಿಸಿಅನುಮೋದಿಸಬೇಕು ಮತ್ತು ಆಯಾ ಜಿಲ್ಲಾ ಉಪ ನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆರವರಿಂದ ಕಡ್ಡಾಯವಾಗಿ ಪರಿಶೀಲಿಸಿ ದೃಢೀಕರಿಸಬೇಕು.



Generated from eOffice by MAMATHA S, AHF-Asst(MS), ASSISTANT, Animal Husbandary Fisheries sec on 13/06/2022 12:09 PM

1. ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು
   - ರಾಜ್ಯ ಮಟ್ಟದಲ್ಲಿ ಪಶು ಸಂಗೋಪನಾ ಇಲಾಖೆಯ ಆಯುಕ್ತರು ಈ ಕಾರ್ಯಕ್ರಮದ ಅನುಷ್ಠಾನಾಧಿಕಾರಿಗಳ ಮೇಲ್ವಿಚಾರಕರಾಗಿ ಕಾರ್ಯ ನಿರ್ವಹಿಸಬೇಕು.
   - ಈ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆಯೊಂದಿಗೆ ಇಲಾಖೆಯ ಅನುಷ್ಠಾನಾಧಿಕಾರಿಗಳಿಗೆ ಆಗಿಂದಾಗ್ಗೆ ನಿರ್ದೇಶನ ಹಾಗೂ ಮಾರ್ಗಸೂಚಿಗಳನ್ನು ಹೊರಡಿಸಬೇಕು.

2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ, ಬೆಂಗಳೂರು
   - ಕಾರ್ಯಕ್ರಮದ ಅನುಷ್ಠಾನದ ಕುರಿತು ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯಸೇವಾ ಇಲಾಖೆ, ಬೆಂಗಳೂರು ರವರಿಗೆ ವರದಿ ಸಲ್ಲಿಸಬೇಕು.
   - ಅರ್ಹ ಫಲಾನುಭವಿಗಳಿಗೆ ಪರಿಹಾರ ಧನವನ್ನು ವ್ಯವಸ್ಥಾಪಕ ನಿರ್ದೇಶಕರು ಮಂಜೂರು ಮಾಡಬೇಕು.
   - ಪರಿಹಾರ ಪಡೆದ ಫಲಾನುಭವಿಗಳ ಯಾದಿ ಹಾಗೂ ವಹಿಗಳನ್ನು ರಾಜ್ಯಮಟ್ಟದಲ್ಲಿ ವ್ಯವಸ್ಥಾಪಕ ನಿರ್ದೇಶಕರು ನಿರ್ವಹಿಸಬೇಕು.

3. ಉಪ ನಿರ್ದೇಶಕರು, ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆ
   - ಈ ಯೋಜನೆಯ ವ್ಯಾಪಕ ಪ್ರಚಾರಕ್ಕಾಗಿ ಕ್ರಮ ಕೈಗೊಳ್ಳಬೇಕು. ಹಾಗೂ ತಾಲ್ಲೂಕು ಸಮಿತಿಯಿಂದ ಬಂದ ವರದಿಗಳನ್ನು ಪರಿಶೀಲಿಸಿ ಎಲ್ಲಾ ಫೋಟೋಗಳಲ್ಲಿ ಪಶುವೈದ್ಯರುಗಳು ಇರುವುದನ್ನು ಖಾತ್ರಿಪಡಿಸಿಕೊಂಡು ಧೃಡೀಕರಿಸಿ ಸಲ್ಲಿಸಬೇಕು. ಪಶುವೈದ್ಯರುಗಳು ಮತ್ತು ಫಲಾನುಭವಿಯು ಫೋಟೋದಲ್ಲಿ ಇಲ್ಲದಿದ್ದಲ್ಲಿ ಕಡ್ಡಾಯವಾಗಿ ತಿರಸ್ಕರಿಸಬೇಕು.
   - ಈ ಯೋಜನೆಗಳ ಪ್ರಗತಿ ಕುರಿತು ಜಿಲ್ಲಾ ಮಟ್ಟದ ಕ್ರೋಢೀಕೃತ ವರದಿಗಳನ್ನು ನಿಗಧಿತ ನಮೂನೆಯಲ್ಲಿ ಪ್ರತಿ ತಿಂಗಳೂ 5ನೇ ತಾರೀಖಿನ ಒಳಗಾಗಿ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಸಲ್ಲಿಸಬೇಕು.

4. ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತದ ಜಿಲ್ಲಾ ಉಸ್ತುವಾರಿ ಅಧಿಕಾರಿಗಳು:
   - ತಾಲ್ಲೂಕು ಮಟ್ಟದ ಪರಿಹಾರ ಸಮಿತಿಯ ವರದಿಗಳು ಮತ್ತು ಫಲಾನುಭವಿಗಳ ಮಾಹಿತಿಗಳನ್ನು ಸೂಕ್ತ ದಾಖಲೆಗಳೊಂದಿಗೆ ಉಪನಿರ್ದೇಶಕರುಗಳಿಂದ ಪಡೆದು ಅರ್ಹ ಅರ್ಜಿಗಳನ್ನು ಸೂಕ್ತ ದಾಖಲೆಗಳೊಂದಿಗೆ ಪರಿಹಾರ ನೀಡಲು ಧೃಢೀಕರಣ ಪತ್ರದೊಂದಿಗೆ ಸಾದಿಲ್ವಾರು ಬಿಲ್ಲನೊಂದಿಗೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇವರಿಗೆ ಪರಿಹಾರ ಮಂಜೂರಾತಿಗಾಗಿ ಸಲ್ಲಿಸಬೇಕು. ಮಂಜೂರಾದ ಪರಿಹಾರಧನವನ್ನು ಫಲಾನುಭವಿಯ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡಬೇಕು.
   - ತಾಲ್ಲೂಕು ಸಮಿತಿ ವರದಿ ಮತ್ತು ಎಲ್ಲಾ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಸಾದಿಲ್ವಾರು ಬಿಲ್ಲು ತಯಾರಿಸಿ ನಿಗಮದ ಕೇಂದ್ರ ಕಛೇರಿಗೆ ಸಲ್ಲಿಸಬೇಕು.
   - ಈ ಯೋಜನೆಗಳ ಅನುಷ್ಠಾನಕ್ಕೆ ಸಬಂಧಿಸಿದಂತೆ ಫಲಾನುಭವಿಗಳ ಯಾದಿ ಹಾಗೂ ವಹಿಯನ್ನು ನಿರ್ವಹಿಸಬೇಕು.
   - ಪ್ರತಿ ಮಾಹೆಯಲ್ಲಿ ಈ ಯೋಜನೆಗಳ ಪ್ರಗತಿಯ ವಿವರಗಳನ್ನು ನಿಗದಿತ ನಮೂನೆಯಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇವರಿಗೆ ಪ್ರತಿಮಾಹೆಯ 5ನೇ ದಿನಾಂಕದೊಳಗೆ ಸಲ್ಲಿಸಬೇಕು.

* ಈ ಯೋಜನೆಯಡಿಯ ಫಲಾನುಭವಿಗಳ ಪಟ್ಟಿ ಹಾಗೂ ಬಿಡುಗಡೆಯಾದ ಪರಿಹಾರ ಧನ ವಿತರಣೆ ಕುರಿತು ವಿವರಗಳ ಮಾಹಿತಿಯನ್ನು ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಸ್ಥಳೀಯ ಸಹಾಯಕ ನಿರ್ದೇಶಕರು ಪಶುವೈದ್ಯಾಧಿಕಾರಿಗಳಿಗೆ ನೀಡುವುದು.

7 ಸಹಾಯಕ ನಿರ್ದೇಶಕರು, ಪಶುವೈದ್ಯಾಧಿಕಾರಿಗಳು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ:

* ಈ ಯೋಜನೆಯ ವ್ಯಾಪಕ ಪ್ರಚಾರ ಕೈಗೊಂಡು ಕುರಿಗಾರರಿಗೆ ತಿಳುವಳಿಕೆ ನೀಡಬೇಕು. ಮರಣ ಹೊಂದಿದ ಕುರಿ/ಮೇಕೆ ಮರಿಗಳ ಜೊತೆಗೆ ಶವ ಪರೀಕ್ಷೆ ಮೊದಲು ಮತ್ತು ಶವಪರೀಕ್ಷೆ ನಂತರ ಶವಪರೀಕ್ಷೆ ನಡೆಸಿದ ಪಶುವೈದ್ಯರು ಮತ್ತು ಫಲಾನುಭವಿಯು ಸಹಿತ ಕಲರ್ ಛಾಯಾಚಿತ್ರ ಕಡ್ಡಾಯವಾಗಿ ತೆಗೆಸಿ ಶವ ಪರೀಕ್ಷೆ ನಡೆಸಿದ ಪಶುವೈದ್ಯರು ಧೃಢೀಕರಿಸಬೇಕು. ಈ ಯೋಜನೆಯಡಿ ಪರಿಹಾರ ಧನ ನೀಡುವ ಮರಣ ಹೊಂದಿದ್ದ ಕುರಿ / ಮೇಕೆ/ ಮರಿಗಳ ಮರಣೋತ್ತರ ವರದಿ ನೀಡುವುದು. ಕುರಿ/ಮೇಕೆ/ಮರಿಗಳ ಮರಣಕ್ಕೆ ಸಂಬಂಧಿಸಿದಂತೆ ಏನೇ ತಕರಾರುಗಳು ಇದ್ದರೂ ಕುರಿ/ಮೇಕೆ/ಮರಿಗಳ ಮಾಲೀಕರು ಹಾಗೂ ಮರಣೋತ್ತರ ಪರೀಕ್ಷೆ ನಡೆಸಿದ ಪಶುವೈದ್ಯರೇ ನೇರ ಜವಾಬ್ದಾರಿ /ಹೊಣೆಗಾರರಾಗಿರುತ್ತಾರೆ. ಉದ್ದೇಶಪೂರ್ವಕವಾಗಿ ಸಾಯಿಸಿದ ಕುರಿ/ಮೇಕೆಗಳು ಪರಿಹಾರ ವ್ಯಾಪ್ತಿಗೆ ಬರುವುದಿಲ್ಲ. ಈ ಸಂದರ್ಭದಲ್ಲಿ ಕುರಿಗಾರರೇ ನೇರ ಜವಾಬ್ದಾರಿ /ಹೊಣೆಗಾರರಾಗಿರುತ್ತಾರೆ.
* ಬೇರೆಡೆ ಪರಿಹಾರ ಪಡೆದಿದ್ದಲ್ಲಿ ಪರಿಹಾರ ಮೊತ್ತವನ್ನು ಕಳೆದು ಪರಿಹಾರ ನೀಡಲು ಕ್ರಮಕೈಗೊಳ್ಳಬೇಕು.

( ಡಿ.ಎಸ್. ಸುದರ್ಶನ್ ಕುಮಾರ್) 10/7/17
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಪಶುಸಂಗೋಪನೆ)



Generated from eOffice by MAMATHA S, AHF-Asst(MS), ASSISTANT, Animal Husbandary Fisheries sec on 13/06/2022 12:09 PM

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಜಾನುವಾರುಗಳಲ್ಲಿ ಕಂಡುಬರುವ ಚರ್ಮಗಂಟು ರೋಗದಿಂದ (Lumpy Skin Disease) ಮರಣಿಸಿದ ಜಾನುವಾರುಗಳ ಮಾಲೀಕರಿಗೆ ಪರಿಹಾರ ನೀಡಲು ಅನುದಾನ ಬಿಡುಗಡೆ ಮಾಡುವ ಕುರಿತು.

**ಓದಲಾಗಿದೆ:-**

1. 2022-23ನೇ ಸಾಲಿನ ಆಯವ್ಯಯ ಸಾಲುವಾರು ವೆಚ್ಚ ಅಂದಾಜುಗಳು-ಬೇಡಿಕೆವಾರು ಸಂಪುಟ-3ರ ನಿಗಧಿಯಾದ ಅನುದಾನ.
2. ಸರ್ಕಾರದ ಆದೇಶ ಸಂಖ್ಯೆ: ಪಸಂಮೀ 46 ಪಪಾಯೋ 2022, ದಿನಾಂಕ:12.04.2022.
3. ಸರ್ಕಾರದ ಆದೇಶ ಸಂಖ್ಯೆ:ಪಸಂಮೀ 45 ಪಪಾಯೋ 2022, ದಿನಾಂಕ:26.04.2022.
4. ಆಯುಕ್ತಾಲಯದ, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಇವರ ಪತ್ರ ಹಾಗೂ ಕಡತ ಸಂಖ್ಯೆ: CAHVS-LDC0SCL/41/2022-LIVEHCAH-COMM AHVS.

******

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಗೆ 2022-23ನೇ ಸಾಲಿನ ಆಯವ್ಯಯ ಸಾಲುವಾರು ವೆಚ್ಚ ಅಂದಾಜುಗಳು-ಬೇಡಿಕೆವಾರು ಸಂಪುಟ-3ರಲ್ಲಿ ಅನುದಾನ ನಿಗಧಿಯಾಗಿರುತ್ತದೆ.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಆದೇಶದಲ್ಲಿ 2022-23ನೇ ಸಾಲಿನಲ್ಲಿ ಇಲಾಖೆಯ ವಿವಿಧ ಯೋಜನಾ ಲೆಕ್ಕ ಶೀರ್ಷಿಕೆಗಳಡಿ ರಾಜ್ಯವಲಯದ ವಿವಿಧ ಕಾರ್ಯಕ್ರಮಗಳಿಗೆ ಮತ್ತು ನಿಗಮ ಮಂಡಳದ ಯೋಜನೆಗಳಿಗೆ ಆಯವ್ಯಯದಲ್ಲಿ ನಿಗಧಿಯಾದ ಅನುದಾನಕ್ಕೆ ತಕ್ಕಂತೆ ಕ್ರಿಯಾ ಯೋಜನೆಗಳಿಗೆ ಅನುಮೋದನೆ ನೀಡಿ ಆದೇಶಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಆದೇಶದಲ್ಲಿ 2022-23ನೇ ಸಾಲಿಗೆ ಲೆಕ್ಕ ಶೀರ್ಷಿಕೆ:2404-00-191-1-17 ಹಾಲು ಉತ್ಪಾದಕರಿಗೆ ಉತ್ತೇಜನ ಯೋಜನೆಯಡಿ ಉಪ ಶೀರ್ಷಿಕೆ:100 ಧನ ಸಹಾಯ/ಪರಿಹಾರದಡಿ ಮೊದಲನೇ ಮತ್ತು ಎರಡನೇ ತ್ರೈಮಾಸಿಕ ಅನುದಾನ ಬಿಡುಗಡೆಮಾಡಿ ಆದೇಶಿಸಲಾಗಿರುತ್ತದೆ.

ಮುಂದುವರೆದು, ಮೇಲೆ ಕ್ರಮ ಸಂಖ್ಯೆ (4) ರಲ್ಲಿ ಓದಲಾದ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಆಯುಕ್ತಾಲಯದ ಪತ್ರ ಹಾಗೂ ಕಡತದಲ್ಲಿ ಚರ್ಮ ಗಂಟು ರೋಗದಿಂದ (Lumpy Skin Disease) ಮರಣ ಹೊಂದುವ ಜಾನುವಾರು ಮಾಲೀಕರಿಗೆ ಪರಿಹಾರ ನೀಡುವ ಬಗ್ಗೆ ಪ್ರಸ್ತಾಪಿಸಿ ಚರ್ಮಗಂಟು ರೋಗವು ಜಾನುವಾರುಗಳಲ್ಲಿ ಕಂಡು ಬರುವ ಸಾಂಕ್ರಾಮಿಕ ವೈರಸ್ ಕಾಯಿಲೆಯಾಗಿದ್ದು, ಈ ಕಾಯಿಲೆಯು ಸಿಡುಬು ರೋಗ ವೈರಸ್ Poxiviridae ಕುಟುಂಬದ Capripox ವೈರಸ್ ನಿಂದ ಉಂಟಾಗುತ್ತದೆ. ರೋಗಗ್ರಸ್ಥ ಪ್ರಾಣಿಗಳಲ್ಲಿ ಪ್ರಾರಂಭಿಕ ಹಂತದಲ್ಲಿ ಜ್ವರ, ತದನಂತರ ವಾರದಲ್ಲಿ ಚರ್ಮಗಂಟು ಕಾಣಿಸಿ ಕ್ರಮೇಣ ಚರ್ಮ ಗಂಟು / ಹಕ್ಕಳೆ / ತುರಿಗಳಾಗಿ ಜಾನುವಾರುಗಳಲ್ಲಿ ಮಾರಣಾಂತಿಕವಾಗಿ ಕಾಡುತ್ತದೆ. ರೋಗಗ್ರಸ್ಥ ದನಗಳು ಜ್ವರದಿಂದ ಬಳಲಿ ಮಂಕಾಗಿ ಮೂಗು, ಕಣ್ಣುಗಳಲ್ಲಿ ಸೋರುವಿಕೆ, ಜೊಲ್ಲುಸೋರುವುದು, ಮೇವು ತಿನ್ನದೆ ಬಡಕಲಾಗುತ್ತವೆ. ರಾಸುಗಳು ಶ್ವಾಸಕೋಶದ ಉರಿಯೂತದಿಂದ ಸಾವನ್ನಪ್ಪಬಹುದು ಸಾಮಾನ್ಯವಾಗಿದೆ.

ಚರ್ಮಗಂಟು ರೋಗವು ನೇರವಾಗಿ ಜಾನುವಾರುಗಳ ಆರೋಗ್ಯವನ್ನು ಹದಗೆಡಿಸಿ ಜಾನುವಾರುಗಳ ಉತ್ಪಾದಕತೆಯನ್ನು ಕುಂಠಿತಗೊಳಿಸುವುದರಿಂದ ರೈತರು ಹಾಗೂ ಜಾನುವಾರು ಮಾಲೀಕರ ಆರ್ಥಿಕ ಸ್ಥಿತಿಯ ಮೇಲೆ ಪರಿಣಾಮ ಬೀರುತ್ತಿದೆ. ಈ ರೋಗದಿಂದ ಉಂಟಾಗುವ ಜಾನುವಾರುಗಳ ಮರಣದಿಂದ ರೈತರ/ಜಾನುವಾರು ಮಾಲೀಕರಿಗೆ ನಷ್ಟವನ್ನು ಭರಿಸಲು ಪ್ರತಿ ಹೈನು ರಾಸುಗಳಿಗೆ ಗರಿಷ್ಠ ರೂ.20000/– ಮತ್ತು ಎತ್ತುಗಳಿಗೆ ರೂ.30000/–ಸಾವಿರ ಪರಿಹಾರ ಧನ ನೀಡಲು ವಿನಂತಿಸಿ ಲೆಕ್ಕಶೀರ್ಷಿಕೆ:2403–00–106–0–04 (ಕೇ.ಪು.ಯೋ– ರಾಜ್ಯದ ಪಾಲು– ರಾಷ್ಟ್ರೀಯ ಜಾನುವಾರು ಮಿಷನ್), ಉಪ ಲೆಕ್ಕಶೀರ್ಷಿಕೆ: 059– ಇತರೆ ವೆಚ್ಚ, 422–ಎಸ್.ಸಿ.ಎಸ್.ಪಿ., 423–ಟಿ.ಎಸ್.ಪಿ. ರಡಿಯಲ್ಲಿ ಅನುದಾನವನ್ನು ಒದಗಿಸಲು ಕೋರುತ್ತಾ ಚರ್ಮಗಂಟು ರೋಗದಿಂದ ಮರಣಿಸಿದ ಜಾನುವಾರುಗಳ ಮಾಲೀಕರಿಗೆ ಪರಿಹಾರ ಧನ ವಿತರಿಸಲು ಅನುಸರಿಸಬಹುದಾದ ಮಾರ್ಗಸೂಚಿಗಳೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇ–ಪಸಂಮೀ 82 ಪಪಾಯೋ 2022 (ಭಾಗ–1)**
**ಬೆಂಗಳೂರು, ದಿನಾಂಕ: 01.10.2022.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ರಾಜ್ಯದಲ್ಲಿ ಚರ್ಮಗಂಟು ರೋಗದಿಂದ (Lumpy Skin Disease) ಮರಣಿಸಿದ ಜಾನುವಾರುಗಳ ಮಾಲೀಕರಿಗೆ ಪರಿಹಾರ ಧನ ನೀಡುವ ಸಂಬಂಧ ರೂ.2.00 ಕೋಟಿ (ಎರಡು ಕೋಟಿ ರೂಪಾಯಿಗಳು ಮಾತ್ರ) ಗಳ ಅನುದಾನವನ್ನು ಲೆಕ್ಕ ಶೀರ್ಷಿಕೆ:2404–00–191–1–17 ಹಾಲು ಉತ್ಪಾದಕರಿಗೆ ಉತ್ತೇಜನ ಯೋಜನೆಯಡಿ ಉಪ ಶೀರ್ಷಿಕೆ:100 ಧನ ಸಹಾಯ/ಪರಿಹಾರದಡಿ ಲಭ್ಯವಿರುವ ಅನುದಾನದಿಂದ ಬಿಡುಗಡೆಗೊಳಿಸಿದೆ.

ರಾಜ್ಯದಲ್ಲಿ ಚರ್ಮಗಂಟು ರೋಗ (Lumpy Skin Disease) ದಿಂದ ಮರಣಿಸಿದ ಜಾನುವಾರುಗಳ ಮಾಲೀಕರಿಗೆ ವಿತರಿಸಲಾಗುವ ಪರಿಹಾರ ಧನವನ್ನು ಈ ಕೆಳಗಿನಂತೆ ನಿಗದಿಪಡಿಸಿದೆ.

| ಕ್ರಮ ಸಂಖ್ಯೆ | ಜಾನುವಾರು ವಿವರ | ಪರಿಹಾರಧನದ ಮೊತ್ತ (ರೂಗಳಲ್ಲಿ) |
|---|---|---|
| 01 | ಕರು | 5,000/– (ಪ್ರತಿ ಕರುವಿಗೆ) |
| 02 | ಹಸು | 20,000/–( ಪ್ರತಿ ಹಸುವಿಗೆ) |
| 03 | ಎತ್ತು | 30,000/–( ಪ್ರತಿ ಎತ್ತುವಿಗೆ) |

ಮುಂದುವರೆದು, ರಾಜ್ಯದಲ್ಲಿ ಚರ್ಮಗಂಟು ರೋಗದಿಂದ (Lumpy Skin Disease) ಮರಣಿಸಿದ ಜಾನುವಾರುಗಳ ಮಾಲೀಕರಿಗೆ ಪರಿಹಾರ ಧನವನ್ನು ವಿತರಿಸಲು ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸತಕ್ಕದ್ದು.

1. ಚರ್ಮಗಂಟು ರೋಗಕ್ಕೆ ತುತ್ತಾಗಿ ಮರಣ ಹೊಂದಿದ ಜಾನುವಾರುವಿನ ಚಿಕಿತ್ಸಾ ಮಾಹಿತಿಯನ್ನು ಆಧರಿಸಿ ಸಂಬಂಧಪಟ್ಟ ಸ್ಥಳೀಯ ಪಶುವೈದ್ಯಾಧಿಕಾರಿಗಳಿಂದ ಜಾನುವಾರುವಿನ ಮರಣ ದೃಢೀಕರಣ ಪತ್ರ ಹೊಂದಿರುವುದು.
2. ಚರ್ಮಗಂಟು ರೋಗದಿಂದ ಮರಣ ಹೊಂದಿದ ಜಾನುವಾರು ವಿಮಾ ಸೌಲಭ್ಯ ಹೊಂದಿದಲ್ಲಿ ಮರಣ ಪರಿಹಾರ ಧನವನ್ನು ಪಾವತಿಸತಕ್ಕದ್ದಲ್ಲ.
3. ಪರಿಹಾರ ಧನವನ್ನು ಜಾನುವಾರು ಮಾಲೀಕರ ಆಧಾರ್ ಸಂಖ್ಯೆ ಜೋಡಿಸಲ್ಪಟ್ಟಿರುವ ಬ್ಯಾಂಕ್ ಖಾತೆಗೆ RTGS/ NEFT ಮುಖಾಂತರ ನೇರವಾಗಿ ಪಾವತಿಸುವುದು.

...3

4. ಚರ್ಮಗಂಟು ರೋಗದಿಂದ ಮರಣ ಹೊಂದಿದ ಜಾನುವಾರುವಿನ ಸೂಕ್ತ ಛಾಯಚಿತ್ರಗಳು ಹಾಗೂ ಯುಐಡಿ ಇಯರ್ ಟ್ಯಾಗ್ ಅಪೇಕ್ಷಿತವಾಗಿರುತ್ತದೆ.
5. 1ನೇ ಆಗಸ್ಟ್ 2022 ರಿಂದ ಈ ಆದೇಶವನ್ನು ಹೊರಡಿಸಿದ ದಿನಾಂಕದವರೆಗೂ ಚರ್ಮಗಂಟು ರೋಗದಿಂದ ಮರಣಿಸಿದ ಜಾನುವಾರುಗಳ ಛಾಯಚಿತ್ರಗಳು ಲಭ್ಯವಿಲ್ಲದಿದ್ದ ಪಕ್ಷದಲ್ಲಿ, ಮರಣಿಸಿದ ಜಾನುವಾರುಗಳ ಮಾಲೀಕರಿಗೆ ಛಾಯಚಿತ್ರಗಳನ್ನು ಒದಗಿಸುವಂತೆ ಒತ್ತಾಯಿಸುವಂತಿಲ್ಲ.
6. 1ನೇ ಆಗಸ್ಟ್ 2022 ರಿಂದ ಈ ಆದೇಶವನ್ನು ಹೊರಡಿಸಿದ ದಿನಾಂಕದವರೆಗೂ ಪಶುವೈದ್ಯಾಧಿಕಾರಿಗಳ ಗಮನಕ್ಕೆಬಾರದೇ ಚರ್ಮಗಂಟು ರೋಗಕ್ಕೆ ತುತ್ತಾಗಿ ಮರಣ ಹೊಂದಿ ಅಂತ್ಯಕ್ರಿಯೆಗೊಂಡಿದ್ದ ಪಕ್ಷದಲ್ಲಿ ಸ್ಥಳೀಯ ಪಶುವೈದ್ಯಾಧಿಕಾರಿಗಳು ಸಂಬಂಧಪಟ್ಟ ಗ್ರಾಮಪಂಚಾಯತಿ ಸದಸ್ಯರು ಹಾಗೂ ಮೂರು ಜನ ಸ್ಥಳೀಯ ಗ್ರಾಮಸ್ಥರ ಸಮಕ್ಷಮದಲ್ಲಿ ಪಂಚನಾಮೆ ಮಾಡಿ ಸದರಿ ಕಾಯಿಲೆಯಿಂದಲೇ ಜಾನುವಾರು ಮರಣ ಹೊಂದಿರುವುದಾಗಿ ಖಚಿತಪಟ್ಟಲ್ಲಿ **ಅನುಬಂಧ**ದಲ್ಲಿರುವಂತೆ ದೃಢೀಕರಣ ಪತ್ರ ನೀಡುವುದು.

ಈ ಅನುದಾನವನ್ನು ನಿಯಮಾನುಸಾರ ಯಾವ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಉಪಯೋಗಿಸಿಕೊಂಡು ಕಡ್ಡಾಯವಾಗಿ ಹಣಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು. ಮತ್ತು ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ:ಖ2/ಪಿಎಂಯು/92/2015–16, ದಿನಾಂಕ:27.03.2018ರ ಕ್ರಮ ಸಂಖ್ಯೆ: 01 ರಿಂದ 04 ರಲ್ಲಿ ಸೂಚಿಸಿರುವಂತೆ ಅನುಷ್ಠಾನಗೊಳಿಸುವುದು.

ಸ್ವೀಕರ್ತನಾ ರಸೀದಿ ಮೇಲೆ (Pay Receipts) ಹಣ ಪಡೆಯುವ ಅಧಿಕಾರಿಗಳು, ಆಯುಕ್ತರು ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು ರವರ ಮೇಲು ಸಹಿ ಪಡೆದು ಖಜಾನೆಯಿಂದ ಹಣ ಸೆಳೆಯಲು ಅನುಮತಿ ನೀಡಿದೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ 2000 ರ ನಿಯಮಗಳನ್ನು ತಪ್ಪದೇ ಕಡ್ಡಾಯವಾಗಿ ಪಾಲಿಸುವ ಷರತ್ತಿಗೊಳಪಟ್ಟು ಅನುದಾನ ಬಿಡುಗಡೆಗೊಳಿಸಿ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ/398/ವೆಚ್ಚ–4/2022, ದಿನಾಂಕ:30.09.2022 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹಾಗೂ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 01 ಟಿಎಫ್‌ಪಿ 2022, ದಿನಾಂಕ : 04.04.2022 ರಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರಿಗೆ ಹಣ ಬಿಡುಗಡೆ ಮಾಡಲು ಆರ್ಥಿಕ ಅಧಿಕಾರ ಪ್ರತ್ಯಾಯೋಜಿಸಿರುವ ವಿತ್ತಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬಿ.ಎನ್. ಪ್ರವೀಣ್)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
(ಪಶುಸಂಗೋಪನೆ)

ಗೆ:

1. ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು.

...4

3. ಎಲ್ಲಾ ಜಿಲ್ಲಾಧಿಕಾರಿಗಳು (ಆಯುಕ್ತರ ಮುಖಾಂತರ)
4. ಎಲ್ಲಾ ಜಿಲ್ಲೆಗಳ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಣಾ ಅಧಿಕಾರಿಗಳು. (ಆಯುಕ್ತರ ಮುಖಾಂತರ)
5. ನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಹಾಲು ಉತ್ಪಾದಕರ ಮಹಾಮಂಡಳಿ ನಿಯಮಿತ, ಕೆ.ಎಂ.ಎಫ್ ಸಂಕೀರ್ಣ, ಡಾ: ಎಂ.ಹೆಚ್. ಮರೀಗೌಡ ರಸ್ತೆ, ಬೆಂಗಳೂರು.
7. ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ (ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಇವರ ಮುಖಾಂತರ)
8. ಇಲಾಖೆಯ ಎಲ್ಲಾ ಪಶುವೈದ್ಯಾಧಿಕಾರಿಗಳು (ಆಯುಕ್ತರ ಮುಖಾಂತರ)
9. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನಸೌಧ.
10. ಖಜಾನಾಧಿಕಾರಿಗಳು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
11. ಉಪ ನಿರ್ದೇಶಕರು, ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು.
12. ಖಜಾನಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

**ಪ್ರತಿಯನ್ನು ಮಾಹಿತಿಗಾಗಿ:**

1. ಸನ್ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಮಾನ್ಯ ಪಶುಸಂಗೋಪನೆ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.
5. ಸರ್ಕಾರದ ಜಂಟಿ ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.
6. ಕಂಟ್ರೋಲ್ ರೂಂ ಕಂ-24/7 ಹೆಲ್ಪ್ ಲೈನ್ (ಸಹಾಯವಾಣಿ) ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಹೆಬ್ಬಾಳ, ಬೆಂಗಳೂರು.
7. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

## ಅನುಬಂಧ

## ದೃಢೀಕರಣ ಪತ್ರ

(1ನೇ ಆಗಸ್ಟ್ 2022 ರಿಂದ ಈ ಆದೇಶವನ್ನು ಹೊರಡಿಸಿದ ದಿನಾಂಕದವರೆವಿಗೂ ಮರಣ ಹೊಂದಿರುವ ಜಾನುವಾರುಗಳಿಗೆ ಮಾತ್ರ)

ಶ್ರೀ/ಶ್ರೀಮತಿ..........................................ಇವರು ಜಿಲ್ಲೆ....................ತಾಲ್ಲೂಕು.........................ಗ್ರಾಮ.................................ದ ನಿವಾಸಿಯಾಗಿದ್ದು ಇವರಿಗೆ ಸಂಬಂಧಿಸಿದ .........ವರ್ಷದ ............... (ಕರು/ಹಸು/ಎತ್ತು) ಜಾನುವಾರು ಚರ್ಮಗಂಟು ರೋಗದಿಂದ (Lumpy Skin Disease) ದಿನಾಂಕ:---------------- ರಂದು ಮರಣಿಸಲ್ಪಟ್ಟಿದೆ ಎಂದು ಈ ಕೆಳಗಿನವರ ಸಹಿಯೊಂದಿಗೆ ದೃಢೀಕರಿಸಲ್ಪಟ್ಟಿದೆ.

| ಕ್ರಮ ಸಂಖ್ಯೆ | ವಿವರ | ಹೆಸರು | ವಿಳಾಸ | ದಿನಾಂಕ | ಸಹಿ ಮತ್ತು ಮೊಹರು |
|---|---|---|---|---|---|
| 1 | ಸ್ಥಳೀಯ ಗ್ರಾಮಸ್ಥರು | | | | |
| 2 | ಸ್ಥಳೀಯ ಗ್ರಾಮಸ್ಥರು | | | | |
| 3 | ಸ್ಥಳೀಯ ಗ್ರಾಮಸ್ಥರು | | | | |
| 4 | ಗ್ರಾಮಪಂಚಾಯತಿ ಸದಸ್ಯರು | | | | |
| 5 | ಪಶುವೈದ್ಯಾಧಿಕಾರಿ | | | | |